**ಮೆ. ಬಾಬಾ ಅಖಿಲಾ ಸಾಯಿ ಜ್ಯೋತಿ ಇಂಡಸ್ಟ್ರೀಸ್ ಪ್ರೈವೇಟ್ ಲಿಮಿಟೆಡ್, ಇವರು ಇವರು ಕೊಪ್ಪಳ ಜಿಲ್ಲೆಯ ಕೊಪ್ಪಳ ತಾಲ್ಲೂಕಿನ ಚಿಕ್ಕಬಗನಾಳ ಗ್ರಾಮದ ಸರ್ವೆ ನಂಬರ್ 79, 84 ಮತ್ತು ಕುಣಿಕೇರಿ ಗ್ರಾಮದ ಸರ್ವೆ ನಂಬರ್: 90/5, 90/7, 90/8, 90/9 ಮತ್ತು 91/6 ಒಟ್ಟು ಕ್ಷೇತ್ರ: 41-50 ಎಕರೆ ಪ್ರದೇಶದಲ್ಲಿ ಸ್ಪಾಂಜ್ ಐರಾನ್ ಸ್ಥಾವರದ ಸಾಮರ್ಥ್ಯವನ್ನು 175 ಟಿ.ಪಿ.ಡಿ. ಇಂದ 375 ಟಿ.ಪಿ.ಡಿ. ಗೆ 72,000 ಟಿ.ಪಿ.ಎ. ಸಾಮರ್ಥ್ಯದ ರೋಲಿಂಗ್ ಮಿಲ್, 12 ಮೆ.ವ್ಯಾ. (ಡಬ್ಲ್ಯೂ.ಹೆಚ್.ಆರ್.ಬಿ-06 ಮೆ.ವ್ಯಾ., ಎ.ಎಫ.ಬಿ.ಸಿ-06 ಮೆ.ವ್ಯಾ.) ಸಾಮರ್ಥ್ಯದ ಸಹ ವಿದ್ಯುತ್ ಘಟಕದ ಸ್ಥಾಪನೆಯೊಂದಿಗೆ ಉಕ್ಕು ಸ್ಥಾವರದ ವಿಸ್ತರಣೆಗಾಗಿ ಪ್ರಸ್ತಾವನೆ ಸಲ್ಲಿಸಿರುವ ಪ್ರಯುಕ್ತ ಉದ್ದೇಶಿತ ಯೋಜನೆಯ ಸ್ಥಾಪನೆಯ ಹಿನ್ನೆಲೆಯಲ್ಲಿ ನಡೆದ ಪರಿಸರ ಸಾರ್ವಜನಿಕ ಆಲಿಕೆ ಸಭೆಯ ನಡುವಳಿಕೆಗಳು.**

| | | |
|---|---|---|
| **ದಿನಾಂಕ** | : | 17.08.2021. |
| **ಸಮಯ** | : | ಬೆಳಿಗ್ಗೆ 11:00 ಗಂಟೆ |
| **ಸ್ಥಳ** | : | ಉದ್ದೇಶಿತ ಯೋಜನೆಯ ಪ್ರದೇಶ, ಮೆ. ಬಾಬಾ ಅಖಿಲಾ ಸಾಯಿ ಜ್ಯೋತಿ ಇಂಡಸ್ಟ್ರೀಸ್ ಪ್ರೈವೇಟ್ ಲಿಮಿಟೆಡ್, ಚಿಕ್ಕಬಗನಾಳ ಗ್ರಾಮದ ಸರ್ವೆ ನಂಬರ್ 79 ಮತ್ತು 84 ಹಾಗೂ ಕುಣಿಕೇರಿ ಗ್ರಾಮದ ಸರ್ವೆ ನಂಬರ್ 90/5, 90/7, 90/8, 90/9 ಮತ್ತು 91/6 ತಾ:ಜಿ: ಕೊಪ್ಪಳ. |

ಮೆ. ಬಾಬಾ ಅಖಿಲಾ ಸಾಯಿ ಜ್ಯೋತಿ ಇಂಡಸ್ಟ್ರೀಸ್ ಪ್ರೈವೇಟ್ ಲಿಮಿಟೆಡ್ ಇವರು ಕೊಪ್ಪಳ ಜಿಲ್ಲೆಯ ಕೊಪ್ಪಳ ತಾಲ್ಲೂಕಿನ ಚಿಕ್ಕಬಗನಾಳ ಗ್ರಾಮದ ಸರ್ವೆ ನಂಬರ್ 79, 84 ಮತ್ತು ಕುಣಿಕೇರಿ ಗ್ರಾಮದ ಸರ್ವೆ ನಂಬರ್: 90/5, 90/7, 90/8, 90/9 ಮತ್ತು 91/6 ದಲ್ಲಿ ಕೈಗಾರಿಕಾ ಪ್ರದೇಶವನ್ನು ಅಭಿವೃದ್ಧಿ ಪಡಿಸಲು ಉದ್ದೇಶಿಸಿರುತ್ತಾರೆ. ಈ ಬಗ್ಗೆ ದಿನಾಂಕ: 17-08-2021 ರಂದು ಮಾನ್ಯ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ದಂಡಾಧಿಕಾರಿಗಳು ಕೊಪ್ಪಳ ಜಿಲ್ಲೆ, ಕೊಪ್ಪಳ, ಇವರ ಅಧ್ಯಕ್ಷತೆಯಲ್ಲಿ ಯೋಜನೆಯ ಸ್ಥಳದಲ್ಲಿ ನಡೆಸಿದ ಪರಿಸರ ಸಾರ್ವಜನಿಕ ಆಲಿಕೆ ಸಭೆಯ ನಡುವಳಿಗಳು.

| | | |
|---|---|---|
| ಪರಿಸರ ಸಾರ್ವಜನಿಕ ಸಭೆ ನಡೆದ ಸ್ಥಳ | : | ಉದ್ದೇಶಿತ ಯೋಜನೆಯ ಪ್ರದೇಶ, ಮೆ. ಬಾಬಾ ಅಖಿಲಾ ಸಾಯಿ ಜ್ಯೋತಿ ಇಂಡಸ್ಟ್ರೀಸ್ ಪ್ರೈವೇಟ್ ಲಿಮಿಟೆಡ್, ಸರ್ವೆ ನಂಬರ್ 79 ಮತ್ತು 84 ಚಿಕ್ಕಬಗನಾಳ ಗ್ರಾಮ, ಸರ್ವೆ ನಂಬರ್ 90/5, 90/7, 90/8, 90/9 ಮತ್ತು 91/6 ಕುಣಿಕೇರಿ ಗ್ರಾಮ, ತಾಲೂಕು ಮತ್ತು ಜಿಲ್ಲೆ-ಕೊಪ್ಪಳ. |
| ಹಾಜರಿದ್ದ ಅಧಿಕಾರಿಗಳ ವಿವರ | : | ಅನುಬಂಧ-1 |
| ಯೋಜನೆಯ ಪರವಾಗಿ ಹಾಜರಿದ್ದ ಪ್ರತಿನಿಧಿಗಳ ವಿವರ | : | ಅನುಬಂಧ-2 |
| ಭಾಗವಹಿಸಿದಂತಹ ಸಾರ್ವಜನಿಕರ ವಿವರ | : | ಅನುಬಂಧ-3 |
| ಪರಿಸರ ಸಾರ್ವಜನಿಕ ಸಭೆಯ ಬಗ್ಗೆ ನೀಡಿದ ಪತ್ರಿಕಾ ಪ್ರಕಟಣೆಯ ವಿವರಗಳು | : | ಅನುಬಂಧ-4 |

ಶಕ್ತಿ ಬಿಂದು ಪ್ರದರ್ಶನದ ವಿವರಗಳು : ಅನುಬಂಧ-5

ಸಾರ್ವಜನಿಕರು ಲಿಖಿತ ರೂಪದಲ್ಲಿ ಸಲ್ಲಿಸಿದ ಅಹವಾಲುಗಳು : ಅನುಬಂಧ-6

ಪರಿಸರ ಸಾರ್ವಜನಿಕ ಆಲಿಕೆ ಸಭೆಯ ಆಡಿಯೋ ಮತ್ತು ವಿಡಿಯೋ ಇರುವ ಸಿ.ಡಿ.ಗಳು : ಅನುಬಂಧ-7

ಸಾರ್ವಜನಿಕರು ಲಿಖಿತ ರೂಪದಲ್ಲಿ ಸಲ್ಲಿಸಿದ ಅಹವಾಲುಗಳು : ಅನುಬಂಧ-8

ಕೇಂದ್ರ ಅರಣ್ಯ, ಪರಿಸರ ಹಾಗೂ ಹವಾಮಾನ ಬದಲಾವಣೆ ಸಚಿವಾಲಯದ ಅಧಿಸೂಚನೆ ದಿನಾಂಕ: 14-09-2006 (ತಿದ್ದುಪಡಿ ದಿನಾಂಕ: 01-12-2009) ರ ಪ್ರಕಾರ ಯಾವುದೇ ಯೋಜನೆಯ ಪರಿಸರ ವಿಮೋಚನಾ ಪತ್ರವನ್ನು ಪಡೆಯುವ ಪೂರ್ವದಲ್ಲಿ ಪರಿಸರ ಕುರಿತು ಸಾರ್ವಜನಿಕ ಆಲಿಕೆ ಸಭೆಯನ್ನು ಕಡ್ಡಾಯವಾಗಿರುತ್ತದೆ ಹಾಗೂ ಸದರಿ ಸಭೆಯನ್ನು ಆಯೋಜಿಸುವ ಜವಾಬ್ದಾರಿಯು ಮಂಡಳಿಯದ್ದಾಗಿರುತ್ತದೆ.

ಕೇಂದ್ರ ಅರಣ್ಯ ಮತ್ತು ಪರಿಸರ ಹಾಗೂ ಹವಾಮಾನ ಬದಲಾವಣೆ ಮಂತ್ರಾಲಯ, ಭಾರತ ಸರಕಾರ (ಪರಿಣಾಮ ಅಧ್ಯಯನ ವಿಭಾಗ) ನವದೆಹಲಿ, ಇವರು ಸದರಿ ಯೋಜನೆಯ Standards Terms of Referenceನ್ನು ದಿನಾಂಕ: 13-06-2019 ರಂದು ಅಂತಿಮಗೊಳಿಸಿ ಅದರಂತೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯನ್ನು ಸಾರ್ವಜನಿಕ ಪರಿಸರ ಸಭೆಯನ್ನು ನಡೆಸಲು ಕೋರುವಂತೆ **ಮೆ. ಬಾಬಾ ಅಖಿಲಾ ಸಾಯಿ ಜ್ಯೋತಿ ಇಂಡಸ್ಟ್ರೀಸ್ ಪ್ರೈವೇಟ್ ಲಿಮಿಟೆಡ್** ರವರಿಗೆ ತಿಳಿಸಿರುತ್ತಾರೆ. ಸದರಿ ಯೋಜನೆಯ ಅದಿಭೋಗದಾರರ ಪತ್ರದ ದಿನಾಂಕ: 18.02.2021 ರ ಮೂಲಕ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯನ್ನು ಪರಿಸರ ಸಾರ್ವಜನಿಕ ಸಭೆಯನ್ನು ನಡೆಸುವಂತೆ ಕೋರಿರುತ್ತಾರೆ.

ಯೋಜನಾ ಪ್ರವರ್ತಕರ ಮನವಿಯ ಮೇರೆಗೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ವತಿಯಿಂದ ಜಿಲ್ಲಾಧಿಕಾರಿಗಳು, ಕೊಪ್ಪಳ ಇವರಿಗೆ ಪರಿಸರ ಸಾರ್ವಜನಿಕ ಆಲಿಕೆ ಸಭೆ ನಡೆಸಲು ಸೂಕ್ತ ದಿನಾಂಕ: ಮತ್ತು ಸಮಯವನ್ನು ನೀಡಲು ದಿನಾಂಕ: 16.04.2021 ರಂದು ಪತ್ರದ ಮೂಲಕ ಕೋರಲಾಗಿರುತ್ತದೆ. ಅದರಂತೆ ಪರಿಸರ ಸಾರ್ವಜನಿಕ ಆಲಿಕೆ ಸಭೆಯು ದಿನಾಂಕ: 28.05.2021 ರಂದು ನಿಗಧಿಯಾಗಿತ್ತು. ಈ ಬಗ್ಗೆ ದಿನಾಂಕ: 28.04.2021 ರಂದು "ಪ್ರಜಾವಾಣಿ" (ಕನ್ನಡ), "ದಿ ನ್ಯೂ ಇಂಡಿಯನ್ ಎಕ್ಸಪ್ರೇಸ್" (ಆಂಗ್ಲ ಭಾಷೆ) ಯಲ್ಲಿ ಮತ್ತು ಸ್ಥಳಿಯ ದಿನಪತ್ರಿಕೆ ಕಿತ್ತೂರು ಕರ್ನಾಟಕದಲ್ಲಿ ದಿನಾಂಕ: 29.04.2021 ರಂದು ಪತ್ರಿಕಾ ಪ್ರಕಟಣೆಯನ್ನು ಹೊರಡಿಸಲಾಗಿರುತ್ತದೆ. ಆದರೆ ಕೋವಿಡ್-19 ಸಾಂಕ್ರಾಮಿಕ ರೋಗದ ಹರಡುವಿಕೆಯನ್ನು ತಡೆಗಟ್ಟುವ ನಿಟ್ಟಿನಲ್ಲಿ ಯಾವುದೇ ಸಾರ್ವಜನಿಕ ಸಭೆ, ಸಮಾರಂಭಗಳು ಜರುಗಿಸುವುದು ನಿರ್ಬಂಧಿಸಲಾಗಿರುವ ಕಾರಣ ಸದರಿ ಸಭೆಯನ್ನು ಮುಂದೂಡಲಾಗಿತ್ತು.

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗೆ ಮುಂದೂಡಿದ ಪರಿಸರ ಸಾರ್ವಜನಿಕ ಸಭೆಯನ್ನು ನಡೆಸುವಂತೆ ಮಾನ್ಯ ಜಿಲ್ಲಾಧಿಕಾರಿಗಳು ದಿನಾಂಕ: 17.08.2021 ರಂದು ದಿನಾಂಕವನ್ನು ಸೂಚಿಸಿ ಸಭೆಯನ್ನು ನಡೆಸಲು ತಿಳಿಸಿರುತ್ತಾರೆ. ಆದ್ದರಿಂದ ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಮಾನ್ಯ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ದಂಡಾಧಿಕಾರಿಗಳು ಕೊಪ್ಪಳ ಜಿಲ್ಲೆ, ಕೊಪ್ಪಳ

ಇವರ ಅಧ್ಯಕ್ಷತೆಯಲ್ಲಿ ನಡೆಸಲಾಗಿರುತ್ತಿದೆ ಎಂದು ಪರಿಸರ ಅಧಿಕಾರಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಕೊಪ್ಪಳ ಇವರು ಸಭೆಯಲ್ಲಿ ಹಾಜರಿದ್ದ ಸದಸ್ಯರಿಗೆ ಹಾಗೂ ಸಾರ್ವಜನಿಕರಿಗೆ ತಿಳಿಸಿದರು.

ಸದರಿ ವಿಸ್ತರಣಾ ಯೋಜನೆಯ ಕಾರ್ಯನಿರ್ವಹಣಾ ಸಾರಾಂಶ ವರದಿಯನ್ನು ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ತಯಾರಿಸಿ ಮತ್ತು ಪರಿಸರ ಪರಿಣಾಮ ಅಧ್ಯಯನ ವರದಿಯೊಂದಿಗೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗೆ ಸಲ್ಲಿಸಿರುತ್ತಾರೆ. ಸದರಿ ಅಧಿಸೂಚನೆಯ ಪ್ರಕಾರ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು 30 ದಿನಗಳ ಮುಂಚೆ, ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ನಡೆಸುವ ಬಗ್ಗೆ ವಿವರವನ್ನು ಸಾರ್ವಜನಿಕರಿಗೆ ತಿಳಿಸುವ ಸಂಬಂಧ ಪತ್ರಿಕಾ ಪ್ರಕಟಣೆಯನ್ನು ರಾಜ್ಯ ಮಟ್ಟದ ಪತ್ರಿಕೆಗಳಾದ 'ಪ್ರಜಾವಾಣಿ" (ಕನ್ನಡ), "ದಿ ನ್ಯೂ ಇಂಡಿಯನ್ ಎಕ್ಸಪ್ರೆಸ್" (ಆಂಗ್ಲ ಭಾಷೆ) ಯಲ್ಲಿ ದಿನಾಂಕ: 17.07.2021 ರಂದು ಹಾಗೂ ಸ್ಥಳೀಯ ಮಟ್ಟದಲ್ಲಿ "ನಾಗರೀಕ" ದಿನ ಪತ್ರಿಕೆಯಲ್ಲಿ ದಿನಾಂಕ: 16.07.2021 ರಂದು ಪತ್ರಿಕಾ ಪ್ರಕಟಣೆಯನ್ನು ಹೊರಡಿಸಲಾಗಿರುತ್ತದೆ. ಉದ್ದೇಶಿತ ಪ್ರದೇಶದ ಸುತ್ತಮುತ್ತಲೂ ವಾಸವಾಗಿರುವ ಆಸಕ್ತ ನಿವಾಸಿಗಳು, ಪರಿಸರ ಆಸಕ್ತ ಗುಂಪುಗಳು ಮತ್ತು ಈ ಯೋಜನೆಯಿಂದ ತೊಂದರೆಗೊಳಗಾಗುವ ಸಾರ್ವಜನಿಕರು ತಮ್ಮ ಸಲಹೆ, ಅಹವಾಲು, ಅನಿಸಿಕೆ ಹಾಗೂ ಆಕ್ಷೇಪಣೆಗಳನ್ನು ನೇರವಾಗಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ/ಜಿಲ್ಲಾಧಿಕಾರಿಗಳು ಕೊಪ್ಪಳ ಜಿಲ್ಲೆ, ಕೊಪ್ಪಳ ಇವರಿಗೆ ಸಲ್ಲಿಸುವಂತೆ ಪತ್ರಿಕಾ ಪ್ರಕಟಣೆಯಲ್ಲಿ ಪ್ರಕಟಿಸಲಾಗಿರುತ್ತದೆ ಎಂದು ಪರಿಸರ ಅಧಿಕಾರಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಪ್ರಾದೇಶಿಕ ಕಛೇರಿ, ಕೊಪ್ಪಳ ಇವರು ಸಭೆಗೆ ಮಾಹಿತಿಯನ್ನು ಒದಗಿಸಿದರು.

ಶ್ರೀ ಕೆ. ರಾಜು, ಪರಿಸರ ಅಧಿಕಾರಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಪ್ರಾದೇಶಿಕ ಕಛೇರಿ, ಕೊಪ್ಪಳ ಹಾಗೂ ಹಿರಿಯ ಪರಿಸರ ಅಧಿಕಾರಿಗಳು (ಹೆಚ್ಚುವರಿ ಪ್ರಭಾರ) ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ವಲಯ ಕಛೇರಿ, ಬಳ್ಳಾರಿ ಇವರು ಶ್ರೀ ವಿಕಾಸ್ ಕಿಶೋರ್ ಸುರಳ್ಕರ್ ಭಾ.ಆ.ಸೇ., ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ದಂಡಾಧಿಕಾರಿಗಳು ಕೊಪ್ಪಳ ಜಿಲ್ಲೆ ರವರಿಗೆ ಸ್ವಾಗತವನ್ನು ಕೋರಿದರು ಮತ್ತು ತಹಶೀಲ್ದಾರ, ಕೊಪ್ಪಳ ಹಾಗೂ ಇತರೆ ಇಲಾಖೆಯ ಅಧಿಕಾರಿಗಳು, ಯೋಜನೆಯ ಸಿಬ್ಬಂದಿಗಳು ಮತ್ತು ಸುತ್ತಮುತ್ತಲಿನ ಹಳ್ಳಿಯ ಸಾರ್ವಜನಿಕರನ್ನು, ಮಾಧ್ಯಮ ಪ್ರತಿನಿಧಿಗಳನ್ನು ಮತ್ತು ಪರಿಸರ ಪ್ರೇಮಿಗಳನ್ನು ಸ್ವಾಗತಿಸಿ ಪರಿಸರ ಸಾರ್ವಜನಿಕ ಆಲಿಕೆ ಸಭೆಯ ಉದ್ದೇಶವನ್ನು ಸಭೆಗೆ ತಿಳಿಸಿ, ಯೋಜನೆಯ ಕಾರ್ಯಕಾರಿ ಸಾರಾಂಶವನ್ನು ಸಾರ್ವಜನಿಕ ಪರಾಮರ್ಶೆಗೆ ಸಂಬಂಧಪಟ್ಟ ಕಛೇರಿಗಳಲ್ಲಿ ಪ್ರಚೂರಪಡಿಸಲಾಗಿರುತ್ತದೆ ಎಂದು ತಿಳಿಸಿದರು. ಮಾನ್ಯ ಜಿಲ್ಲಾಧಿಕಾರಿಗಳು, ಕೊಪ್ಪಳ ಜಿಲ್ಲೆ, ಕೊಪ್ಪಳ ಇವರನ್ನು ಸದರಿ ಸಭೆಯ ಅಧ್ಯಕ್ಷತೆವಹಿಸಿಕೊಂಡು ಸಭೆಯನ್ನು ಜರುಗಿಸಲು ವಿನಂತಿಸಿಕೊಂಡರು. ಸದರಿ ಯೋಜನೆಯ ಕಾರ್ಯಚಟುವಟಿಕೆಗಳ ಬಗ್ಗೆ ಮತ್ತು ಅಳವಡಿಸಬಹುದಾದಂತಹ ಮಾಲಿನ್ಯ ನಿಯಂತ್ರಣ ಕ್ರಮಗಳ ಬಗ್ಗೆ ವಿವರವಾದ ವರದಿಯನ್ನು ಸಾರ್ವಜನಿಕರಿಗೆ ತಿಳಿಸುವಂತೆ ಮಾನ್ಯ ಜಿಲ್ಲಾಧಿಕಾರಿಗಳು,ಕೊಪ್ಪಳ ರವರು ಯೋಜನೆಯ ಪ್ರತಿನಿಧಿಗಳಿಗೆ ಸೂಚಿಸಿದರು.

ಸದರಿ ಯೋಜನೆಯ ಪ್ರತಿನಿಧಿಗಳು ಮತ್ತು ಯೋಜನೆಯ ತಾಂತ್ರಿಕ ಸಲಹೆಗಾರರಾದ ಮೆ: ಮೆಟಮಾರ್ಫೋಸಿಸ್ ಪ್ರಾಜೆಕ್ಟ್ ಕನ್ಸಲ್ಟಂಟ್ಸ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು, ಇವರು ಸದರಿ ಯೋಜನೆಯ ಕಾರ್ಯ ಚಟುವಟಿಕೆಗಳ ಬಗ್ಗೆ ವಿವರಗಳನ್ನು Power point presentation ಮುಖಾಂತರ ಸಭೆಗೆ ತಿಳಿಸಿದರು. ಸದರಿ ವಿವರಗಳನ್ನು **ಅನುಬಂಧ-5** ರಲ್ಲಿ ಲಗತ್ತಿಸಲಾಗಿರುತ್ತದೆ. ಮಾನ್ಯ ಜಿಲ್ಲಾಧಿಕಾರಿಗಳು,ಕೊಪ್ಪಳ ರವರು ಮಾತನಾಡಿ ಈ ಯೋಜನೆಗೆ ಸಂಬಂಧಿಸಿದಂತೆ ಸಾರ್ವಜನಿಕರು ತಮ್ಮ ಅಹವಾಲು ಸಲ್ಲಿಸಲು ಹಾಗೂ

ಅನಿಸಿಕೆಗಳನ್ನು ವ್ಯಕ್ತಪಡಿಸಲು ತಿಳಿಸಿದರು. ಸಾರ್ವಜನಿಕರು ಈ ಕೆಳಗಿನಂತೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು.

**1) ಮೇಹಬೂಬ ಬೇಟಗೇರಿ, ಸಾ: ಚಿಕ್ಕಬಗನಾಳ**

ಸಭೆಯ ಗಣ್ಯಮಾನ್ಯರಿಗೆಲ್ಲರಿಗೂ ಹಾಗೂ ಸಭೆಯಲ್ಲಿ ಭಾಗಿಯಾದಂತಹ ಸಾರ್ವಜನಿಕರಿಗೂ ನನ್ನ ನಮಸ್ಕಾರಗಳು, ಭಾರತ ದೇಶವು ಎರಡು ವಲಯಗಳ ಮೇಲೆ ಅವಲಂಬಿತವಾಗಿದೆ. ಆ ಎರಡು ವಲಯಗಳೆಂದರೆ ಒಂದು ಕೃಷಿ ಮತ್ತೊಂದು ಕೈಗಾರಿಕೆ ಹಾಗೂ ಈ ಎರಡು ವಲಯಗಳ ಮೇಲೆ ದೇಶದ ಆರ್ಥಿಕತೆಯು ಅವಲಂಬಿತವಾಗಿದೆ. ಮೆ. ಬಾಬಾ ಅಖಿಲಾ ಸಾಯಿ ಜ್ಯೋತಿ ಇಂಡಸ್ಟ್ರೀಸ್ ಪ್ರೈವೇಟ್ ಲಿಮಿಟೆಡ್ ಉದ್ದಿಮೆಯು ಕಳೆದ 13-14 ವರ್ಷದಿಂದ ಕುಣಿಕೇರಿ ಜಮೀನುಗಳ ಮೇಲೆ ಸ್ಥಾಪಿತವಾಗಿದೆ. ಈ ಕಾರ್ಖಾನೆಯಿಂದ ಪ್ರಾರಂಭದಲ್ಲಿ ತೊಂದರೆಯಾಗಿತ್ತು, ಆದರೆ ಈಗ ಆ ಮಟ್ಟದ ಪರಿಣಾಮ/ ತೊಂದರೆ ಕಾಣಿಸುತ್ತಿಲ್ಲ. ಈ ಕಂಪನಿಯವರು ಪಕ್ಕದ ಗ್ರಾಮಗಳ ಊರಿನ ಜಾತ್ರೆ ಮತ್ತು ಸಾಮಾಜಿಕ ಕಾರ್ಯಕ್ರಮಗಳಿಗೆ ಸಾಕಷ್ಟು ದೇಣಿಗೆಯನ್ನು ನೀಡುತ್ತಾ ಬಂದಿದ್ದಾರೆ. ಕೇವಲ ಕೃಷಿಯಿಂದ ಏನು ಮಾಡಲು ಸಾಧ್ಯವಿಲ್ಲ ಅದರಲ್ಲಿ ಕೈಗಾರಿಕೆಯ ಪಾತ್ರ ಬಹುಮುಖ್ಯ, ಈ ಉದ್ದಿಮೆಯ ಸ್ಥಾಪನೆಯಿಂದ ರೈತರಿಗೆ ಅನುಕೂಲ ಮಾಡಿದ್ದಾರೆ. ಇನ್ನು ಉದ್ದಿಮೆಯು ಹೆಚ್ಚಿಸುತ್ತಿರುವ ಸಾಮರ್ಥ್ಯದ ಸ್ಥಾಪನೆಗೆ ಮಾನ್ಯ ಜಿಲ್ಲಾಧಿಕಾರಿಗಳು ಅನುಮತಿ ನೀಡಬೇಕೆಂದು ಕೋರುತ್ತೇನೆ ಈ ಕಂಪನಿಯಿಂದ ಇಲ್ಲಿ ವಾಸಿಸುವ ಜನರ ಆರ್ಥಿಕ ಮಟ್ಟವು ಸುಧಾರಿಸಿದೆ ಎಂದು ತಿಳಿಸಿದರು.

**2) ನಿಂಗರಾಜ ವೀರಾಪೂರ, ಚಿಕ್ಕಬಗನಾಳ**

ಮೊದಲನೆಯದಾಗಿ ನಾನು ಈ ಉದ್ದಿಮೆಯ ಪರವಾಗಿ ಮಾತಾನಾಡುತ್ತೇನೆ. ಸುಮಾರು 2008 ರಲ್ಲಿ ಮೆ. ಬಾಬಾ ಅಖಿಲಾ ಸಾಯಿ ಜ್ಯೋತಿ ಇಂಡಸ್ಟ್ರೀಸ್ ಲಿಮಿಟೆಡ್ ಉದ್ದಿಮೆಯು ಸ್ಥಾಪಿತಗೊಂಡಿದೆ. ನಂತರದಲ್ಲಿ ದೃವದೇಶ್ ಇಂಡಸ್ಟ್ರೀಸ್ ಲಿಮಿಟೆಡ್ ಉದ್ದಿಮೆ ಸ್ಥಾಪನೆಗೊಂಡಿದೆ. ಮೆ. ಬಾಬಾ ಅಖಿಲಾ ಸಾಯಿ ಜ್ಯೋತಿ ಇಂಡಸ್ಟ್ರೀಸ್ ಲಿಮಿಟೆಡ್ ಉದ್ದಿಮೆಯವರು ಗ್ರಾಮಕ್ಕೆ ಬಹಳ ಧನ ಸಹಾಯ ನೀಡಿದ್ದಾರೆ. ಶಾಲಾ ಕಟ್ಟಡಕ್ಕೆ ಸಹಾಯ ನೀಡಿದ್ದಾರೆ, ವಿದ್ಯಾರ್ಥಿಗಳಿಗೆ ಅನುಕೂಲವಾಗಿದೆ. ಇನ್ನೂ ಹೆಚ್ಚಿನ ರೀತಿಯಲ್ಲಿ ಗಿಡ ಬೆಳೆಸಿ ಪರಿಸರ ರಕ್ಷಿಸಿ. ಸುಮಾರು 500 ಮೀಟರ್ ಅಂತರದಲ್ಲಿ ಚಿಕ್ಕಬಗನಾಳ ಗ್ರಾಮವಿದೆ. ಸುಮಾರು 700 ಕುಟುಂಬಗಳು ವಾಸಮಾಡುತ್ತಿವೆ. ಬಡ ಕುಟುಂಬಗಳಿವೆ ಎಲ್ಲರ ಆರೋಗ್ಯವನ್ನು ಗಮನದಲ್ಲಿಟ್ಟುಕೊಂಡು ಕಂಪನಿ ನಡೆಸಿ ಈ ಕಂಪನಿಗೆ ಅನುಮತಿ ನೀಡಲು ಕೋರಲಾಗಿದೆ. ಈ ಗ್ರಾಮದಲ್ಲಿ ಮೆಡಿಕಲ್ ಓದುವ ವಿದ್ಯಾರ್ಥಿಗಳಿದ್ದಾರೆ. ಅವರಿಗೆ ಆದಷ್ಟು ಕಂಪನಿ ಕಡೆಯಿಂದ ಅನುಕೂಲಗಳನ್ನು ನೀಡಿ ಸಮೀಪದಲ್ಲಿಯೇ ಕಂಪನಿ ಇರುವುದರಿಂದ ತೊಂದರೆಯಾಗದಿರುವ ಕುರಿತಂತೆ ಜಾಗೃತಿ ವಹಿಸಿ ಬಡ ಕುಟುಂಬಗಳಿಗೆ ಅನುಕೂಲ ಮಾಡಿ ಕಂಪನಿಯು ಸ್ಥಳೀಯ ಯುವಕರಿಗೆ ವೃತ್ತಿ ನೀಡಲೊತ್ತು ನೀಡಬೇಕು ಎಂದು ಅಭಿಪ್ರಾಯವನ್ನು ಸಲ್ಲಿಸಿದರು.

**3) ಮಂಜುನಾಥ, ಚಿಕ್ಕಬಗನಾಳ**

ಹಳ್ಳಿ, ಗ್ರಾಮ ಬೆಳೆಯಲು ಕೈಗಾರಿಕೆ ಬಹುಮುಖ್ಯ, ಕೈಗಾರಿಕಾ ವಲಯದಿಂದ ಹಳ್ಳಿ ದೇಶ ಅಭಿವೃದ್ದಿ ಕಂಪನಿಯವರು ಶಾಲೆಗಳಿಗೆ, ಸ್ಥಳಿಯರಿಗೆ ಮತ್ತು ಧಾರ್ಮಿಕ ಸೇವೆ ಸಮಾರಂಭಗಳಿಗೆ ಬಹಳ ಧನಸಹಾಯದ ಸೇವೆ ನೀಡಿದ್ದಾರೆ. ಕಂಪನಿಯ ಸ್ಥಾಪನೆಯಿಂದಾಗಿ ಅನಾರೋಗ್ಯ ಕಾಡುತ್ತಿದೆ ಕಂಪನಿಯು ಒಳ್ಳೆಯ ವೈದ್ಯರಿಂದ ತಪಾಸಣೆ ನಡೆಸಿ ಆಸ್ಪತ್ರೆ ನಿರ್ಮಿಸಬೇಕು, ಕಂಪನಿಯಲ್ಲಿ ಕಾರ್ಯನಿರ್ವಹಿಸುವ ಕಾರ್ಮಿಕರಿಗೆ ಶಸ್ತ್ರ ಚಿಕಿತ್ಸೆ ನೀಡಲು

ವ್ಯವಸ್ಥೆಗಳನ್ನು ಕಲ್ಪಿಸಬೇಕು. ಸದರಿ ಕಂಪನಿಯಿಂದ ಭೂಮಿ ಹಾಳಾಗಬಹುದು ಆದುದರಿಂದ ಗಿಡ ಮರಗಳನ್ನು ಹೆಚ್ಚು-ಹೆಚ್ಚಾಗಿ ಬೆಳೆಸಬೇಕು ಬೇಗ-ಬೇಗ ಬೆಳೆಯುವ ಗಿಡ, ಮರಗಳು ಎತ್ತರವಾಗಿ ಬೆಳೆಯುವ ಮರಗಳನ್ನು ಬೆಳೆಸಿ, ಗ್ರಾಮದ ಮೇಲೆ ಧೂಳು ಬೀಳದಿರುವಂತೆ, ಧೂಳು ಕಡಿಮೆ ಮಾಡುವ ಉಪಕರಣಗಳನ್ನು ಅಳವಡಿಸಿಕೊಂಡು, ಸ್ಥಳಿಯರಿಗೆ ಉದ್ಯೋಗದ ವಿಷಯದಲ್ಲಿ ಹೆಚ್ಚಿನ ಆಧ್ಯತೆ ನೀಡುವಂತೆ ಕೋರಿಕೊಂಡರು.

**4) ಕನಕಗೌಡ ಚಿಕ್ಕಬಗನಾಳ**

ಕೈಗಾರಿಕೆಯಿಂದ ಆರ್ಥಿಕ ಅಭಿವೃದ್ಧಿ, ಉದ್ಯೋಗ ಸೃಷ್ಟಿ ಆಗುತ್ತದೆ. ದೇಶದ, ರಾಜ್ಯದ, ಗ್ರಾಮದ ಅಭಿವೃದ್ಧಿ ಕೈಗಾರಿಕೆಗಳಿಂದಾಗುತ್ತದೆ. ಕಂಪನಿಯಿಂದಾಗಿ ಸ್ಥಳೀಯರಿಗೆ ಉದ್ಯೋಗ ಸಿಕ್ಕಿದೆ. ಕಂಪನಿಯಲ್ಲಿ ಈಗಾಗಲೇ ಸ್ಥಳೀಯರಿಗೆ ಅವಕಾಶ ನೀಡಿದ್ದಾರೆ, ಆದರೆ ಇನ್ನು ಹೆಚ್ಚಿನ ಸಂಖ್ಯೆಯಲ್ಲಿ ಸ್ಥಳೀಯರಿಗೆ ಅವಕಾಶಗಳನ್ನು ಕಲ್ಪಿಸಿ ಈ ಭಾಗದಲ್ಲಿ ಉತ್ತಮ ಆರ್ಥಿಕ ಬೆಳವಣಿಗೆ ಆಗಲು ಸ್ಥಳೀಯರಿಗೆ ಉದ್ಯೋಗ ನೀಡಲು ಕ್ರಮಕೈಗೊಳ್ಳಬೇಕು. ಈ ಹಿಂದೆ ಹಳ್ಳಿಗಳಿಂದ ಕೆಲಸ ಅರಸಿಕೊಂಡು ಗೂಳೆ ಹೊಗುವ ಪದ್ದತಿ ಸೃಷ್ಟಿಯಾಗಿತ್ತು ಆದರೆ ಈಗ ಒಳ್ಳೆಯ ಉದ್ಯೋಗ ಅವಕಾಶ ಸೃಷ್ಟಿಯಾಗಿದೆ. ಕಂಪನಿಯವರು ಆರೋಗ್ಯದ ಕುರಿತು ಕಾಳಜಿ ವಹಿಸುತ್ತಿದ್ದಾರೆ, 15 ವರ್ಷದಿಂದ ಈ ಭಾಗ ಬೆಳವಣಿಗೆ ಹೊಂದುತ್ತಿದೆ. ಸ್ಥಳೀಯರಿಗೆ ಉದ್ಯೋಗಾವಕಾಶ ನೀಡಿ, ವಾಹನ ಚಲಿಸಲು ರಸ್ತೆ ಸರಿಯಾಗಿಲ್ಲದಿರುವುದರ ಕಾರಣದಿಂದಾಗಿ ರಸ್ತೆ ಸುಧಾರಣೆ ಆಗಬೇಕಾಗಿದೆ. ಕೊನೆಯದಾಗಿ ಈ ಕಂಪನಿಯವರು ಈ ಭಾಗದ ಜನರಿಗೆ ಎಲ್ಲಾ ಸವಲತ್ತುಗಳನ್ನು ಕಲ್ಪಿಸಿದ್ದಾರೆ ಎಂದು ತಿಳಿಸಿದರು.

**5) ರಾಮಣ್ಣ ಬೆಳಗಿನಹಾಳ, ಕುಣಿಕೇರಿ (MA in Social)**

ಕಂಪನಿಯವರಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ ಕುಣಿಕೇರಿ ಗ್ರಾಮಗಳಿಗೆ, ಎಲ್ಲಾ ಗ್ರಾಮಗಳಲ್ಲಿ ಜೂನ ತಿಂಗಳಿನಲ್ಲಿ ಸಸಿ ನೇಡುವ ಕಾರ್ಯಕ್ರಮದ ಮೂಲಕ ಪ್ರತಿಯೊಂದು ಮನೆ ಮುಂದೆ ಒಂದು ಅಥವಾ ಎರಡು ಸಸಿ ನೇಡುವ ಕಾರ್ಯಕ್ರಮ ಮಾಡಿ ಸಸಿ ಬೆಳೆಸಲು ಗ್ರಾಮಗಳನ್ನು ದತ್ತು ಪಡೆಯುವುದರ ಮೂಲಕ ಪ್ರಾಧಾನ್ಯತೆ ನೀಡಿ ಮತ್ತು ಸ್ಮಶಾನ ಸ್ಥಳದಲ್ಲಿಯೂ ಕೂಡ ಗಿಡ, ಮರ ಬೆಳೆಸಲು ಅವಕಾಶ ಕಲ್ಪಿಸಿ. ರಸ್ತೆಯಲ್ಲಿ ಟ್ರಕ್ ಮತ್ತು ಟಿಪ್ಪರ್‌ಗಳು ವೇಗವಾಗಿ ಬರುತ್ತವೆ. ಇದರಿಂದ ಶಾಲಾ ಮಕ್ಕಳಾಗಲಿ, ಚಿಕ್ಕ ಚಿಕ್ಕ ಮಕ್ಕಳಾಗಿರಲಿ ಹಳ್ಳಿ ವಾತಾವರಣದಲ್ಲಿ ರಸ್ತೆ ಬದಿ ಆಡುವುದು ಸಹಜ ಆ ಕಾರಣದಿಂದಾಗಿ ಗ್ರಾಮಗಳಲ್ಲಿ ಸಂಚರಿಸುವಂತಹ ಟಿಪ್ಪರ್ ಮತ್ತು ಲಾರಿಗಳಿಗೆ ವೇಗದ ಮಿತಿಯನ್ನು ಅಳವಡಿಸುವುದು ಅವಶ್ಯಕವಾಗಿರುತ್ತದೆ.

ಎರಡನೆಯದಾಗಿ ಶಿಕ್ಷಣದ ಬಗ್ಗೆ ಒತ್ತು ನೀಡಿ ಸರ್ಕಾರಿ ಶಾಲೆಗಳಿಗೆ ಅನುದಾನ ನೀಡಿ, ಗಣಿತ ಮತ್ತು ವಿಜ್ಞಾನ ವಿಷಯಗಳ ಬಗ್ಗೆ ಕಂಪನಿಯವರಿಂದ ಶಾಲಾ ಮಕ್ಕಳಿಗೆ ಟ್ಯೂಷನ್ ವ್ಯವಸ್ಥೆ ಮಾಡುವುದರ ಮುಖಾಂತರ ಶಾಲಾ ಮಕ್ಕಳಿಗೆ ಅನುಕೂಲಕರ ರೀತಿಯಲ್ಲಿ ವ್ಯವಸ್ಥೆಗಳನ್ನು ಕಲ್ಪಿಸಿ, ಜಾತ್ರೆ, ಹಬ್ಬ, ಸಾಮಾಜಿಕ ಕಾರ್ಯಕ್ರಮಗಳಿಗೆ ಮತ್ತು ಧಾರ್ಮಿಕ ಸಭೆ ಸಮಾರಂಭಗಳಿಗ, ನಿರುದ್ಯೋಗ ಯುವಕರಿಗೆ ಉದ್ಯೋಗ ಒದಗಿಸಿಕೊಡಿ, ರೈತರಿಗೆ ಬೆಳೆಹಾನಿ ಪರಿಹಾರ ನೀಡುವುದಕ್ಕಿಂತ ಇನ್ನು ಹೆಚ್ಚಿನ ರೀತಿಯಲ್ಲಿ ವ್ಯವಸ್ಥೆ ಕಲ್ಪಿಸಿ ಹಾಗೂ ಕೊನೆಯದಾಗಿ ಶಿಕ್ಷಣಕ್ಕೆ ಒತ್ತು ನೀಡಿ ಸ್ಥಳಿಯರಿಗೆ ಉದ್ಯೋಗ ನೀಡಬೇಕು ಎಂದು ಕೋರಿದರು.

**6) ಲೋಕೇಶ್, ಚಿಕ್ಕಬಗನಾಳ**

ಈ ಭಾಗದ ಕೈಗಾರಿಕೆಗಳಿಂದ ಕೆಲವೊಂದು ಅನುಕೂಲಗಳಿದ್ದು, ಇನ್ನೂ ಕೇಲವು ಲೋಪದೋಶಗಳಿವೆ. ಕಂಪನಿಯವರು 18 ಅಡಿ ತಡೆಗೋಡೆ ನಿರ್ಮಿಸಿ ಕಾಂಕ್ರೇಟ್ ರಸ್ತೆ ಮಾಡಬೇಕು. ಮಾಲಿನ್ಯ ನಿಯಂತ್ರಣ ಕ್ರಮಗಳನ್ನು ಅಳವಡಿಸಿಕೊಂಡು ಕಂಪನಿಯಿಂದ ಹೊರಬರುವ ತ್ಯಾಜ್ಯವನ್ನು ತಡೆಹಿಡಿಯಬೇಕು. ಪರಿಸರ ಅಧಿಕಾರಿಗಳು ದೂರುಗಳಿಗೆ ಗಮನವಹಿಸಿ ಸ್ಪಂದಿಸಬೇಕು ಕಂಪನಿಯವರು ಕಾರ್ಮಿಕರಿಗೆ ಆರೋಗ್ಯ ಭದ್ರತೆ ನೀಡಬೇಕು, ಕಂಪನಿಯಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಶಿರಸ್ತ್ರಾಣ, ಬೂಟ್ಸ್ ನೀಡಿರುತ್ತೀರಿ ಹಾಗೂ ಇನ್ನು ಹೆಚ್ಚಿನ ರೀತಿಯ ಸುರಕ್ಷತಾ ಉಪಕರಣಗಳನ್ನು ಒದಗಿಸಬೇಕೆಂದು ತಿಳಿಸಿದರು. .

**7) ರಾಮಣ್ಣ ಚೌಡ್ಕಿ, ಗ್ರಾಮ ಪಂಚಾಯತಿ ಸದಸ್ಯರು**

ಸದರಿ ಕಂಪನಿಯಿಂದ ಅನುಕೂಲ ಇದೆ ಮತ್ತು ಅನಾನುಕೂಲವು ಇದೆ, ಈ ಕೈಗಾರಿಕೆಗಳಿಂದ ದೇಶದ ಆರ್ಥಿಕ ಸುಧಾರಣೆ ಆಗುತ್ತದೆ. ಈ ಭಾಗದಲ್ಲಿ ಆರೋಗ್ಯ ಕಾಪಾಡಲು ಒಂದು ಉತ್ತಮವಾದ ಆಸ್ಪತ್ರೆ ಕಲ್ಪಿಸುವಂತೆ ಮಾನ್ಯ ಜಿಲ್ಲಾಧಿಕಾರಿಗಳಿಗೆ ಮನವಿ ಮಾಡಿದರು.

**8) ಬಾಳಪ್ಪ, ಗ್ರಾಮ ಪಂಚಾಯತಿ ಸದಸ್ಯರು, ಹಿರೆಕಾಸನಕಂಡಿ**

ಈ ಭಾಗದಲ್ಲಿ ರಸ್ತೆಗಳು ಹಾಳಾಗಿವೆ ಹಾಗೂ ಶಾಲಾ ಮಕ್ಕಳಿಗೆ ಬಸ್ ವ್ಯವಸ್ಥೆ ಕಲ್ಪಿಸಬೇಕು ರಸ್ತೆಗಳಲ್ಲಿ ಗುಂಡಿಗಳಿವೆ ಈ ವಿಷಯವನ್ನು ಸ್ಥಳಿಯ ಶಾಸಕರಿಗೆ ಹಾಗೂ ಜಿಲ್ಲಾಧಿಕಾರಿಗಳಿಗೆ ತಿಳಿಸಲಾಗಿದೆ. ರಸ್ತೆಗಳ ರಿಪೇರಿ ಕಾಮಗಾರಿ ಇನ್ನೂ ಮುಗಿದಿಲ್ಲ 1 ಕಿ.ಮೀ ರಸ್ತೆಗೆ 7 ತಿಂಗಳು ಕಾಮಗಾರಿ ನಡೆದಿದ್ದು ಇನ್ನು ಅರ್ಧ ಕಿ.ಮೀ ನಷ್ಟು ರಸ್ತೆ ಮುಗಿದಿಲ್ಲ. ರಸ್ತೆಗಳಲ್ಲಿ 4 ಅಡಿ ಗುಂಡಿ ಬಿದ್ದರೂ ಯಾರು ಗಮನವಹಿಸುತ್ತಿಲ್ಲ ರಸ್ತೆಗಳು ಸರಿ ಇಲ್ಲದ ಕಾರಣ ಕಾಸನಕಂಡಿ ಗ್ರಾಮ ಹಾಗೂ ಇತರ ಗ್ರಾಮಗಳಿಗೆ ತೊಂದರೆಯಾಗುತ್ತಿದೆ. ಮಾನ್ಯ ಜಿಲ್ಲಾಧಿಕಾರಿಗಳು ಗಮನ ವಹಿಸಿ ಈ ಭಾಗದ ರಸ್ತೆಗಳನ್ನು ಸರಿಪಡಿಸಿ ಎಂದು ಕೋರಿರುತ್ತಾರೆ.

**9) ಜಿ.ವಿ ರೆಡ್ಡಿ, ಪರಿಸರವಾದಿ ಬಳ್ಳಾರಿ**

ಮೊದಲನೆಯದಾಗಿ ಈ ಕೈಗಾರಿಕೆಯ ಬೆಳವಣಿಗೆಗೆ ನಾನು ಬೆಂಬಲ ನೀಡುತ್ತೇನೆ ಕೈಗಾರಿಕೆಗಳು ದೇಶದ ಬೆಳವಣಿಗೆಗೆ ಅವಶ್ಯಕವಾಗಿ ಬೇಕಾಗಿರುತ್ತವೆ, ಕೈಗಾರಿಕೆಗಳಿಂದ ನೇರವಾಗಿ ಮತ್ತು ಪರೋಕ್ಷವಾಗಿ ಅನೇಕ ಉದ್ಯೋಗಗಳು ಸಿಗುತ್ತವೆ ಎಂದು ಹೇಳಿ ನನಗೆ ಮಾತನಾಡಲು ಅವಕಾಶ ನೀಡಿದ ಜಿಲ್ಲಾದಿಕಾರಿಗಳಿಗೆ ವಂದಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ ಎಂದು ಸಭೆಗೆ ತಿಳಿಸಿದರು.

**10) ಹೆಚ್. ಮಾಧುಬಾಬು, ಪರಿಸರವಾದಿ ಬಳ್ಳಾರಿ**

ಸ್ಥಳೀಯರಿಗೆ ಕೈಗಾರಿಕೆಯಲ್ಲಿ ಪ್ರಮುಖ್ಯತೆ ಕೊಡಬೇಕು ಸುತ್ತ ಮುತ್ತಲಿನ ಗ್ರಾಮದ ಮಕ್ಕಳಿಗೆ ವಿದ್ಯಾಭ್ಯಾಸದ ವ್ಯವಸ್ಥೆ ಕಲ್ಪಿಸಬೇಕು ಗ್ರಾಮದ ಸರ್ವತೋಮುಖ ಅಭಿವೃದ್ದಿಗೆ ಕಂಪನಿಯವರು ಸಹಾಯ ನೀಡಬೇಕು, ಗಿಡ ಮರಗಳನ್ನು ಬೆಳೆಸಬೇಕು, ಜೀವಿಶಾಸ್ತ್ರ ಅಭಿವೃದ್ಧಿಗೆ ನೆರವಾಗಬೇಕು, ನೀರಿನ ಸಿಂಪಡಣೆಯನ್ನು ಮಾಡುವುದರ ಮುಖಾಂತರ ಹೆಚ್ಚಿನ ಧೂಳು ಹರಡದಂತೆ ಕ್ರಮವಹಿಸಬೇಕು ಮತ್ತು CSR Fund ಬಳಸಿ ಅಭಿವೃದ್ಧಿಯನ್ನು ಕೈಗೊಳ್ಳಬೇಕು ಎಂದು ಕೋರಿಕೊಂಡರು.

**11) ನಾಗಬಸಯ್ಯ**

ಸದರಿ ಕಂಪನಿಯವರಿಂದ ಎಲ್ಲಾ ಸೌಲಭ್ಯಗಳು ಪಡೆದಿದ್ದೇವೆ, ಕಂಪನಿಯವರಿಂದ ಪಕ್ಕದ ಗ್ರಾಮಗಳ ದೇವಸ್ಥಾನ, ಶಾಲೆಗಳಿಗೆ ಮತ್ತು ಧಾರ್ಮಿಕ ಸಭೆ ಸಮಾರಂಭಗಳಿಗೆ ಸಾಕಷ್ಟು ದೇಣಿಗೆ ನೀಡಿದ್ದಾರೆ. ಧೂಳಿನಿಂದ ಆಗಿರುವ ಬೆಳೆ ನಷ್ಟಕ್ಕೆ ಪರಿಹಾರವನ್ನು ಸಹ ನೀಡಿದ್ದಾರೆ ಎಂದು ಸಭೆಗೆ ತಿಳಿಸಿದರು.

**12) ಸಿದ್ದನಗೌಡ ಪೊಲೀಸ್ ಪಾಟೀಲ್**

ಸದರಿ ಕಂಪನಿಯವರು ಎಲ್ಲಾ ಸೌಕರ್ಯಗಳನ್ನು ಒದಗಿಸಿದ್ದಾರೆ, ಚಿಕ್ಕಬಗನಾಳ ಗ್ರಾಮಕ್ಕೆ ಅತಿ ಹೆಚ್ಚು ಸೌಲಭ್ಯ ನೀಡುವ ಕೈಗಾರಿಕೆ ಎಂದರೆ ಅದು ಮೆ. ಬಾಬಾ ಅಖಿಲಾ ಸಾಯಿ ಜ್ಯೋತಿ ಇಂಡಸ್ಟ್ರೀಸ್ ಲಿಮಿಟೆಡ್ ಕಂಪನಿಯಾಗಿದೆ. ಬಾಬಾ ಅಖಿಲಾ ಸಾಯಿ ಜ್ಯೋತಿ ಇಂಡಸ್ಟ್ರೀಸ್ ಕಂಪನಿ 4 ರಿಂದ 5 ಕಿ.ಮೀ ದೂರದ ಜಮೀನುಗಳಿಗೆ ಮತ್ತು ಗ್ರಾಮಗಳಿಗೆ ಧೂಳಿನಿಂದ ಆಗಿರುವ ನಷ್ಟಕ್ಕೆ ಪರಿಹಾರ ನೀಡುವ ಏಕೈಕ ಕಂಪನಿಯೆಂದರೆ ಅದು ಮೆ. ಬಾಬಾ ಅಖಿಲಾ ಸಾಯಿ ಜ್ಯೋತಿ ಇಂಡಸ್ಟ್ರೀಸ್ ಲಿಮಿಟೆಡ್ ಕಂಪನಿಯಾಗಿದೆ ಎಂದು ತಿಳಿಸಿದರು.

ಶ್ರೀ ವಿಕಾಸ್ ಕಿಶೋರ್ ಸುರಳ್ಕರ್, ಮಾನ್ಯ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ದಂಡಾಧಿಕಾರಿಗಳು, ಕೊಪ್ಪಳ ಇವರು ಮಾತನಾಡಿ ಈ ಯೋಜನೆಯ ವಿಷಯವಾಗಿ ಈಗಾಗಲೇ ಹಿರಿಯ ಪರಿಸರ ಅಧಿಕಾರಿಗಳು (ಹೆಚ್ಚುವರಿ

ಪ್ರಭಾರ) ಹಾಗೂ ಪರಿಸರ ಅಧಿಕಾರಿಗಳು ತಿಳಿಸಿರುವಂತೆ ಯೋಜನೆಯ ಬಗ್ಗೆ ಸಾರ್ವಜನಿಕರು ಸಲ್ಲಿಸಿರುವ ಲಿಖಿತ ಹಾಗೂ ಮೌಖಿಕ ಅಹವಾಲುಗಳನ್ನು ಪರಿಗಣಿಸಿ ನಡುವಳಿಯನ್ನು ತಯಾರಿಸಿ ಹಾಗೂ ಈ ಯೋಜನೆಯ ಬಗ್ಗೆ ನನ್ನ ನಿರ್ಧಾರದೊಂದಿಗೆ ಸರ್ಕಾರಕ್ಕೆ ಸಲ್ಲಿಸುವುದಾಗಿ ತಿಳಿಸಿದರು.

ಬಳ್ಳಾರಿ ಜಿಲ್ಲೆಯ ಸಂಡೂರು ಮತ್ತು ಹೊಸಪೇಟೆ ಭಾಗದಲ್ಲಿ ಎತೇಚ್ಛವಾಗಿ ಕಬ್ಬಿಣದ ಅದಿರು ದೊರಕುವುದರಿಂದ ಕೊಪ್ಪಳ ಜಿಲ್ಲೆಯ ಕೊಪ್ಪಳ ತಾಲ್ಲೂಕಿನ ವ್ಯಾಪ್ತಿಯಲ್ಲಿ ಮೆದು ಕಬ್ಬಿಣ ಉತ್ಪಾದನಾ ಘಟಕಗಳು ಸ್ಥಾಪನೆಗೊಂಡಿರುತ್ತವೆ. ಈ ಮೆದು ಕಬ್ಬಿಣದ ಉತ್ಪಾದನಾ ಘಟಕಗಳಿಗೆ ಅಗತ್ಯವಿರುವ ಕಬ್ಬಿಣದ ಅದಿರನ್ನು ಬಳ್ಳಾರಿ ಹಾಗೂ ವಿಜಯನಗರ ಜಿಲ್ಲೆಗಳಿಂದ ಹಳ್ಳಿಗಳ ರಸ್ತೆಗಳನ್ನು ಉಪಯೋಗಿಸಿಕೊಂಡು ಭಾರಿ ಗಾತ್ರದ ವಾಹನಗಳ ಮುಖಾಂತರ ಸಾಗಾಣಿಕೆ ಮಾಡಿಕೊಳ್ಳಲಾಗುತ್ತಿದೆ. ಈ ಕಬ್ಬಿಣದ ಅದಿರು ಸಾಗಿಸುವ ವಾಹನಗಳು ನಿಗಧಿತ ತೂಕಕ್ಕಿಂತ ಹೆಚ್ಚು ಕಬ್ಬಿಣದ ಅದಿರನ್ನು ಸಾಗಾಣಿಕೆ ಮಾಡುತ್ತಿರುವುದರಿಂದ ಹಳ್ಳಿಗಳ ರಸ್ತೆಗಳು ತುಂಬಾ ಹದಗೆಟ್ಟಿರುತ್ತವೆ. ಆದ್ದರಿಂದ, ಈ ಸಾರ್ವಜನಿಕ ವಿಚಾರಣೆಯನ್ನು ನಡೆಸುತ್ತಿರುವ ಉದ್ಯಮವನ್ನು ಒಳಗೊಂಡಂತೆ ಉಳಿದ ಎಲ್ಲಾ ಕೈಗಾರಿಕೋದ್ಯಮಗಳು ಈ ರಸ್ತೆ ಹಾನಿಯ ಹೊಣೆಯನ್ನು ಹೊತ್ತುಕೊಂಡು ರಸ್ತೆ ಸುಧಾರಣೆ, ನಿರ್ವಹಣೆ ಮತ್ತು ಈ ಪ್ರದೇಶದ ರಸ್ತೆಗಳ ಪುನತ್ ನಿರ್ಮಾಣಕ್ಕೆ ಗಣನೀಯ ಕೊಡುಗೆ ನೀಡಬೇಕು.

ಈ ಪ್ರದೇಶದಲ್ಲಿನ ಸ್ಥಾಪನೆಯಾಗಿ ಕಾರ್ಯನಿರ್ವಹಿಸುತ್ತಿರುವ ಕೈಗಾರಿಕೆಗಳಿಂದ ಹೊರ ಹೊಮ್ಮುವ ಹೊಗೆಯಿಂದಾಗಿ ಈ ಪ್ರದೇಶದ ಗಾಳಿಯಲ್ಲಿ ತೇಲಾಡುವ ಕಣಗಳು ಇರುತ್ತವೆ. ವಿಶೇಷವಾಗಿ ಚಳಿಗಾಲದಲ್ಲಿ ರಾತ್ರಿ ಸಮಯದಲ್ಲಿ ಪರಿಮಿತಿಯನ್ನು ದಾಟುತ್ತಿದೆ. ಸದರಿ ಸಭೆಯಲ್ಲಿ ಹಾಜರಿದ್ದ ಜನರು ಸಹ ಈ ವಿಷಯದ ಬಗ್ಗೆ ಕಳವಳ ವ್ಯಕ್ತಪಡಿಸಿರುವುದು ಸ್ಪಷ್ಟವಾಗಿ ಕಾಣಬಹುದು. ಸದರಿ ಕಂಪನಿಯು ತನ್ನ ಕಬ್ಬಿಣದ ಅದಿರು ಸಂಸ್ಕರಣೆಯ ಸಾಮರ್ಥ್ಯದ ವಿಸ್ತರಣೆಯನ್ನು ಮಾಡಲು ಪ್ರಸ್ತಾವನೆಯನ್ನು ಸಲ್ಲಿಸಿದ್ದು, ಮೆ: ಬಾಬಾ ಅಖಿಲಾ ಸಾಯಿ ಜ್ಯೋತಿ ಇಂಡಸ್ಟ್ರೀಸ್ ಪ್ರೈವೇಟ್ ಲಿಮಿಟೆಡ್ ಇವರು ಸದರಿ ಕಂಪನಿಯಿಂದ ಹೊರ ಹೊಮ್ಮುವ ವಿಷಾನಿಲವನ್ನು ಶುದ್ಧೀಕರಿಸಲು ಅತ್ಯಾಧುನಿಕ ತಂತ್ರಜ್ಞಾನವನ್ನು ಬಳಸತಕ್ಕದ್ದು.

ಮೇಲ್ಕಾಣಿಸಿದ ಎರಡು ಷರತ್ತುಗಳು ಅಂದರೆ ಸದರಿ ಪ್ರದೇಶಗಳಲ್ಲಿನ ಮೂಲಸೌಕರ್ಯ, ನಿರ್ವಹಣೆ, ಅಭಿವೃದ್ಧಿ ಮತ್ತು ಪರಿಸರ ಮಾಲಿನ್ಯವನ್ನು, ವಿಶೇಷವಾಗಿ ವಾಯು ಮಾಲಿನ್ಯವನ್ನು ತಡೆಯಲು ಅತ್ಯಾಧುನಿಕ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಲು ಬದ್ಧವಾಗಿರುವ ಷರತ್ತಿಗೊಳಪಟ್ಟು ಚಿಕ್ಕಬಾಗನಾಳ ಗ್ರಾಮದ ಮೆ: ಬಾಬಾ ಅಖಿಲಾ ಸಾಯಿ ಜ್ಯೋತಿ ಇಂಡಸ್ಟ್ರೀಸ್ ಪ್ರೈವೇಟ್ ಲಿಮಿಟೆಡ್ ಇವರ ಪ್ರಸ್ತಾವನೆಯನ್ನು ಪರಿಗಣಿಸಬಹುದಾಗಿರುತ್ತದೆ.

ಸದರಿ ಸಭೆಯಲ್ಲಿ ಸಾರ್ವಜನಿಕರು ಮೌಖಿಕ ಮತ್ತು ಲಿಖಿತ ರೂಪದಲ್ಲಿ ವ್ಯಕ್ತಪಡಿಸಿರುವ ಅನಿಸಿಕೆ/ ಅಹವಾಲು/ ಅಭಿಪ್ರಾಯಗಳನ್ನು ಕನ್ನಡ ಮತ್ತು ಇಂಗ್ಲೀಷ್ ಭಾಷೆಯಲ್ಲಿ ದಾಖಲಿಸಿ ನಡುವಳಿಗಳನ್ನು ತಯಾರಿಸಿ, ಛಾಯಾಚಿತ್ರಗಳು ಮತ್ತು ವೀಡಿಯೋ ದಾಖಲೆಗಳೊಂದಿಗೆ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಸದಸ್ಯ ಕಾರ್ಯದರ್ಶಿಗಳಿಗೆ ಮುಂದಿನ ಅಗತ್ಯ ಕ್ರಮಕ್ಕಾಗಿ ರವಾನಿಸಲಾಗುವುದು ಎಂದು ತಿಳಿಸಿದರು.

ಅಧ್ಯಕ್ಷರ ಅಪ್ಪಣೆ ಮೇರೆಗೆ ವಂದನಾರ್ಪಣೆಯೊಂದಿಗೆ ಈ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

**(ವಿಕಾಸ್ ಕಿಶೋರ್ ಸುರಳ್ಕರ್ ಭಾ.ಆ.ಸೇ.)**
**ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ದಂಡಾಧಿಕಾರಿಗಳು**
**ಮತ್ತು ಪರಿಸರ ಸಾರ್ವಜನಿಕ ಆಲಿಕೆ ಸಭೆ ಅಧ್ಯಕ್ಷರು**
**ಕೊಪ್ಪಳ ಜಿಲ್ಲೆ, ಕರ್ನಾಟಕ**